**ದಿಃ09.01.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ 3ನೇ ಎದುರುದಾರರ ಪರ ಶ್ರೀ .ಕೆ.ಡಿ.ಡಿ ವಕೀಲರಿಂದ ಃ**

ಅಪಘಾತ ಕಾಲಕ್ಕೆ ನಾನು ಕುಶಾಲನಗರದ ಕಾರ್ಯಪ್ಪ ಬಡಾವಣೆಯಲ್ಲಿ ಇರುವ ಮನೆಯಲ್ಲಿ ಇದ್ದೆ. ಅಪಘಾತ ವಿಚಾರವನ್ನು ನನಗೆ ಫೋನ್ ಮಾಡಿ ತಿಳಿಸಿದರು. ಯಾರು ಫೋನ್ ಮಾಡಿದ್ದರು ಎಂದು ನನಗೆ ಮಾಹಿತಿ ಕೊಟ್ಟಿಲ್ಲ. ನನ್ನ ಗಂಡ ಅಪಘಾತ ಸ್ಥಳದಲ್ಲೆ ತೀರಿಕೊಂಡರು. ನನ್ನ ಗಂಡನ ಮೃತ ದೇಹವನ್ನು ಕುಶಾಲನಗರದ ಸರ್ಕಾರಿ ಆಸ್ಪತ್ರೆಯಲ್ಲಿ ನೋಡಿದೆ. ಅಪಘಾತವನ್ನು ನಾನು ನೋಡದೇ ಇರುವುದರಿಂದ ಅಪಘಾತ ಹೇಗಾಯಿತು ಎಂದು ಹೇಳಲು ನನಗೆ ಸಾಧ್ಯವಿಲ್ಲ ಎಂದರೆ ಸರಿ.

2. ಅಪಘಾತ ಮೈಸೂರಿನಿಂದ ಕುಶಾಲನಗಕ್ಕೆ ಬರುವ ರಸ್ತೆಯಲ್ಲಿ ಸಂಭವಿಸಿದೆ. ಅಪಘಾತ ಕಾಲಕ್ಕೆ ನನ್ನ ಗಂಡ ಕುಶಾಲನಗರದಿಂದ ಬೈಲುಕುಪ್ಪೆಗೆ ಕೆಲಸದ ನಿಮಿತ್ತ ಹೋಗುತ್ತಿದ್ದರು. ಅಪಘಾತ ಸ್ಥಳದಲ್ಲಿ ರಸ್ತೆ ಸುಮಾರು 50 ರಿಂದ 60 ಅಡಿ ಅಗಲ ಇದೆ ಎಂದರೆ ರಸ್ತೆಯನ್ನು ನೋಡಿದ್ದೇನೆ ಆದರೆ ಅದರ ಅಗಲ ಗೊತ್ತಿಲ್ಲ ಎನ್ನುತ್ತಾರೆ. ನಾನು ಅಪಘಾತ ಸ್ಥಳಕ್ಕೆ ಯಾವತ್ತೂ ಹೋಗಿ ನೋಡಿಲ್ಲ. ಅಪಘಾತ ಕಾಲಕ್ಕೆ ನಿಮ್ಮ ಗಂಡ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸಾಕ್ಷಿ ಮನೆಯಿಂದ

ಹೋಗುವಾಗ ಹೆಲ್ಮೆಟ್ ನ್ನು ತೆಗೆದುಕೊಂಡು ಹೋಗಿದ್ದರು ಆದರೆ ಅಪಘಾತ ಕಾಲಕ್ಕೆ ಹಾಕಿದ್ದರೊ ಅಥವಾ ಇಲ್ಲವೊ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಗಂಡ ಚಾಲನೆ ಮಾಡುತ್ತಿದ್ದ ಕೆಎ12ಜೆ4334 ವಾಹನ ನನ್ನ ಗಂಡನ ಮಾಲೀಕತ್ವಕ್ಕೆ ಒಳಪಟ್ಟಿತ್ತು. ನನ್ನ ಗಂಡನಿಗೆ ಬೈಕ ಚಾಲನೆ ಮಾಡಲು ಚಾಲನಾ ಪರವಾನಿಗೆ ಪತ್ರ ಇತ್ತು. ಸಾಕ್ಷಿ ಮುಂದುವರೆದು ಅದನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿದ್ದೇನೆ ಎನ್ನುತ್ತಾರೆ. ನಿಮ್ಮ ಗಂಡ ಎಷ್ಟು ವರ್ಷಗಳಿಂದ ಬೈಕ ಚಾಲನೆ ಮಾಡುತ್ತಿದ್ದರು ಎಂದರೆ ಸಾಕ್ಷಿ ನನ್ನ ವಿವಾಹ ಪೂರ್ವದಿಂದಲೂ ಸಹ ಬೈಕ ಚಾಲನೆ ಮಾಡುವ ಅನುಭವ ಹೊಂದಿದ್ದರು ಎನ್ನುತ್ತಾರೆ. ಅಪಘಾತ ನಂತರ ಪೊಲೀಸರು ಹೆಲ್ಮೆಟ್ ನ್ನು ಅಮಾನತು ಪಡಿಸಿದರಾ ಎಂದರೆ ಸಾಕ್ಷಿ ನಾನು ನೋಡಿಲ್ಲ ಎನ್ನುತ್ತಾರೆ. ಅಪಘಾತ ಕಾಲಕ್ಕೆ ನನ್ನ ಗಂಡ ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ತಮ್ಮ ತಪ್ಪಿನಿಂದಾಗಿ ಈ ಅಪಘಾತ ಉಂಟು ಮಾಡಿದ್ದರೆ ಎಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ ನನ್ನ ಗಂಡ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸಾಕ್ಷಿ ಹಾಕಿರಬಹುದು ಎನ್ನುತ್ತಾರೆ. ಅಪಘಾತ ಕಾಲಕ್ಕೆ ನನ್ನ ಗಂಡನಿಗೆ 48 ವರ್ಷ ವಯಸ್ಸು ಆಗಿತ್ತು. ನನ್ನ ಗಂಡನ ವಯಸ್ಸನ್ನು ಸ್ಪಷ್ಟ ಪಡಿಸಲು ಆಧಾರ್ ಕಾರ್ಡ್ ಹಾಜರು ಮಾಡಿದ್ದೇನೆ. ನನ್ನ ಗಂಡ ಪಿ.ಯು.ಸಿ ವರೆಗೆ ವ್ಯಾಸಂಗ ಮಾಡಿದ್ದರು. ನನ್ನ ಗಂಡನ ವಿದ್ಯಾಭ್ಯಾಸದ ಬಗ್ಗೆ

ನನ್ನ ಬಳಿ ದಾಖಲೆ ಇವೆ. 10ನೇ ತರಗತಿ ಅಥವಾ ಪಿ.ಯು.ಸಿ ಅಂಗಪಟ್ಟಿಯನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿದರೆ ನಿಮ್ಮ ಗಂಡನ ನಿಜ ವಯಸ್ಸು ತಿಳಿಯುತ್ತದೆ ಎಂದರೆ ಸರಿ. ನಾನು ನನ್ನ ಗಂಡನ ವಿದ್ಯಾರ್ಹತೆ ಬಗ್ಗೆ ನ್ಯಾಯಾಲಯದ ಮುಂದೆ ಯಾವುದೇ ದಾಖಲೆ ಹಾಜರು ಮಾಡಿಲ್ಲ. ನನ್ನ ಗಂಡನಿಗೆ ಅಪಘಾತ ಕಾಲಕ್ಕೆ 48 ವರ್ಷಗಳಿಂತ ಮೇಲ್ಪಟ್ಟ ವಯಸ್ಸು ಆಗಿತ್ತು ಎಂದರೆ ಸರಿಯಲ್ಲ. ಪರಿಹಾರ ಪಡೆಯಬೇಕೆಂಬ ಉದ್ದೇಶದಿಂದ ಕಡಿಮೆ ವಯಸ್ಸನ್ನು ಹೇಳಿದ್ದೇನೆ ಎಂದರೆ ಸರಿಯಲ್ಲ.

3.ನನ್ನ ಗಂಡ ರೀಯಲ್ ಎಸ್ಟೇಟ್ ಮತ್ತು ಬ್ರೋಕರ್ ಕೆಲಸ ಮಾಡುತ್ತಿದ್ದರು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ. ನನ್ನ ಗಂಡ ಕುಶಾಲನಗರದ ಬಿ.ಎಂ.ರಸ್ತೆಯಲ್ಲಿ ಬಟ್ಟೆ ವ್ಯಾಪಾರ ಮಾಡುತ್ತಿದ್ದರು. ಈ ಸಂಬಂಧ ನನ್ನ ಗಂಡ ಸಣ್ಣ ಅಂಗಡಿಯನ್ನು ಇಟ್ಟುಕೊಂಡಿದ್ದರು. ಸದರಿ ಅಂಗಡಿಗೆ ಎಷ್ಟು ಬಾಡಿಗೆ ಕಟ್ಟುತ್ತಿದ್ದರು ಎಂದು ನನಗೆ ಮಾಹಿತಿ ಇಲ್ಲ. ನನ್ನ ಗಂಡ ಸುಮಾರು 5-6 ವರ್ಷಗಳಿಂದ ಬಟ್ಟೆ ವ್ಯಾಪಾರ ಮಾಡುತ್ತಿದ್ದರು. ಈ ಸಂಬಂಧ ಪಟ್ಟಣ ಪಂಚಾಯಿತಿಯಿಂದ ಪರವಾನಿಗೆ ಪಡೆದಿದ್ದರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಬಟ್ಟೆ ವ್ಯಾಪಾರದಿಂದ ನನ್ನ ಗಂಡನಿಗೆ ಎಷ್ಟು ವಾರಮಾನ ಬರುತ್ತಿತ್ತೂ

ಎಂದು ನನಗೆ ಗೊತ್ತಿಲ್ಲ. ನನ್ನ ಗಂಡನ ಬ್ಯಾಂಕ್ ಖಾತೆ ಇವೆ. ಸದರಿ ಬ್ಯಾಂಕ್ ಖಾತೆಗಳು ಕರ್ನಾಟಕ ಬ್ಯಾಂಕ್, ಎಸ್.ಬಿ.ಐ, ಕರ್ನಾಟಕ ಗ್ರಾಮೀಣ ಬ್ಯಾಂಕ್ ಗಳಲ್ಲಿ ಇದ್ದವು. ನಿಮ್ಮ ಗಂಡನ ಬಾಂಕ್ ಖಾತೆಗಳನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿದರೆ ಅವರಿಗೆ ಎಷ್ಟು ವರಮಾನ ಇತ್ತು ಮತ್ತು ಎಷ್ಟು ಖರ್ಚು ಆಗುತ್ತಿತ್ತು ಎಂದು ತಿಳಿಯುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ನಗದು ರೂಪದಲ್ಲೂ ಸಹ ವ್ಯವಹಾರ ಮಾಡುತ್ತಿದ್ದರು ಎನ್ನುತ್ತಾರೆ. ವ್ಯವಹಾರ ಉದ್ದೇಶದಿಂದ ನನ್ನ ಗಂಡ ಯಾವುದೇ ಬ್ಯಾಂಕಿನಲ್ಲಿ ಸಾಲ ಪಡೆದಿರಲಿಲ್ಲ. ನಿಪಿ.13 ರಂತೆ ಉದ್ದಿಮೆ ಪರವಾನಿಗೆ ಪತ್ರ 18.06.2024 ರವರಿಗೆ ಇದೆ ಎಂದರೆ ಸರಿ. ನಿಪಿ.13 ರ ಪೂರ್ವದ ಪರವಾನಿಗೆ ಪತ್ರ ನನ್ನ ಬಳಿ ಇಲ್ಲ. ನಿಪಿ.13 ರನ್ನು ಈ ಅರ್ಜಿಗಾಗಿ ಸೃಷ್ಟಿಮಾಡಿ ನ್ಯಾಯಾಲಯದ ಮುಂದೆ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ವಾರ್ಷಿಕ 4,92,420/- ರೂ ವರಮಾನ ಇತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಹಾಜರು ಮಾಡಿರುವ ಇನ್ಕಮ್ ಟ್ಯಾಕ್ಸ್ ರಿಟರ್ನ್ಸ್ ನಲ್ಲಿ ನನ್ನ ಗಂಡನ ಅದಾಯ ಮತ್ತು ಖರ್ಚನ್ನು ತೋರಿಸಿಲ್ಲ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನಿಪಿ.14 ರಿಂದ 19 ರ ದಾಖಲೆಗಳನ್ನು ನನ್ನ ಗಂಡ

ಬ್ಯಾಂಕಿನಲ್ಲಿ ಸಾಲ ಪಡೆಯುವ ಉದ್ದೇಶದಿಂದ ಸೃಷ್ಟಿಮಾಡಿದ್ದರು ಎಂದರೆ ಸರಿಯಲ್ಲ. ನಿಪಿ.20 ನ್ನು ಹೆಚ್ಚಿನ ಪರಿಹಾರ ಪಡೆಯಬೇಕೆಂಬ ಉದ್ದೇಶದಿಂದ ಸೃಷ್ಟಿಮಾಡಿ ನ್ಯಾಯಾಲಯದ ಮುಂದೆ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು 10ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದೇನೆ. ನಾನು ಗೃಹಿಣಿ. ಈ ಅಪಘಾತ ನನ್ನ ಗಂಡನ ತಪ್ಪಿನಿಂದಾಗಿ ಸಂಭವಿಸಿದೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯೆಬೆಕೆಂಬ ಉದ್ದೇಶದಿಂದ ನ್ಯಾಯಾಲಯದ ಮುಂದೆ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 3ನೇ ಎದುರುದಾರ ನಮಗೆ ಯಾವುದೇ ಪರಿಹಾರ ಕೊಡಲು ಭಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.